# Tamil Nadu says can't supply anti-rabies vaccine to K'taka

## State Along With Delhi & AP Had Sought TN's Help

Pushpa.Narayan
@timesgroup.com

### DRUG SHORTAGE IN TN TOO: DOCS



- Karnataka needs 1.5 lakh anti-rabies vaccine (ARV) units annually, but supply is limited to 1.2 lakh units
- In the past three years, rabies has claimed 60 lives in Karnataka
- Tamil Nadu agrees to release 50,000 ARV vials to Delhi and Andhra, but says no to Karnataka
- TN doctors too complain of drug shortage, say they are forced to look for substitutes or turn away patients

**Chennai:** Public hospitals across the country are beginning to feel the heat over shortage of various drugs including antibiotics and painkillers. Until Monday, Delhi, Karnataka, and Andhra Pradesh have sought help from Tamil Nadu Medical Services Corporation for essential drugs such as anti-rabies vaccine.

The state has agreed to give some drugs after ensuring there is adequate stock. "We have exercised caution because we know supply of some drugs may not resume immediately. When it does, there will be huge demand," said a senior health official. For now, Tamil Nadu will release 50,000 vials of anti-rabies vaccine to Delhi and Andhra Pradesh, but has declined supply to Karnataka.

Doctors at medical college hospitals across Tamil Nadu have been saying that shortage of drugs has forced them to look for substitutes or simply turn away patients. The crisis spiralled out of a combination of reasons including lack of bidders for dozen drugs and inadequate supply of raw material to manufacturers. Some drugs were in warehouses awaiting quality clearance. "Thirty-two drugs were in short supply, but we managed to get at least five of them in the past three days. It will take at least two weeks for normalcy to return," said an official.

Indian Drug Manufacturing Association chairman (Tamil Nadu, Kerala and Puducherry) J Jayaseelan said the country was exporting active drug ingredients from China for manufacture of domestic drugs because the Centre has fixed a cap on prices for certain drugs for sale within India. "We used active drug ingredients made in India for drugs that we exported to the US and other European countries. But now that we don't get supply from China, manufacturers don't want to make these drugs," he said.

In the last two years, the cost of India-made active ingredients for antibiotics such as erythromycin and painkiller such as tramadol has gone up several times. This is partly because Indian companies source raw material and chemicals from China. But several Chinese firms have closed shop because they are unable to adhere to the new stringent environmental rules of the Chinese government. "The Centre fixes the cost of drugs, but it fails to put a cap on the price of raw materials," said a manufacturer.

Most hospital administrators in the state are working out ways to replenish stock from the public sector and private drug stores using funds from the CM's health insurance scheme and the dean's daily allowance. Some hospitals are asking peripheral hospitals and clinics to redirect surplus drugs to bigger hospitals.

ಪ್ರಜಾವಾಣಿ



'ನೀಟ್'ನಲ್ಲಿ ಉತ್ತಮ ರ್‍ಯಾಂಕ್ ಪಡೆದಿದ್ದ ವಿದ್ಯಾರ್ಥಿ • ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನಕಲಿ ಅಂಕಪಟ್ಟಿ ಕೊಟ್ಟಿದ್ದ

# ಎಂಬಿಬಿಎಸ್ ಪದವೀಧರನಿಗೆ ಜೈಲು ಕಾಣಿಸಿದ ಇ ಮೇಲ್

• ಸಂತೋಷ ಜಿಗಳಿಕೊಪ್ಪ

**ಮುಖ್ಯಾಂಶಗಳು**

- ಅಸಲಿ ಅಂಕ ಪಟ್ಟಿಯನ್ನೇ ಹೋಲುವ ನಕಲಿ ಅಂಕಪಟ್ಟಿ
- ದೂರು ನೀಡಿದ್ದ ಕೆಇಎ ಆಡಳಿತ ಅಧಿಕಾರಿ
- ವ್ಯವಸ್ಥಿತ ಜಾಲವಿರುವ ಅನುಮಾನ

ಬೆಂಗಳೂರು: ಡಾಕ್ಟರ್ ಆಫ್ ಮೆಡಿಸಿನ್ (ಎಂ.ಡಿ) ಸ್ನಾತಕೋತ್ತರ ಪದವಿ ವ್ಯಾಸಂಗಕ್ಕಾಗಿ ಸೀಟು ಗಿಟ್ಟಿಸಿಕೊಳ್ಳಲು ಅಸಲಿ ಅಂಕಪಟ್ಟಿಯನ್ನೇ ಹೋಲುವ ನಕಲಿ ಅಂಕಪಟ್ಟಿ ಕೊಟ್ಟಿದ್ದ ಆರೋಪದಡಿ ಎಂಬಿಬಿಎಸ್ ಪದವೀಧರ ರಾಜೇಶ್‌ಕುಮಾರ್ ರಾಯ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ಬಿಹಾರದ ರಾಜೇಶ್‌ಕುಮಾರ್, ಬೆಂಗಳೂರಿನ ಸಪ್ತಗಿರಿ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಪಡೆದುಕೊಂಡಿದ್ದರು. ದಾಖಲೆಗಳ ಪರಿಶೀಲನೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕೌನ್ಸೆಲಿಂಗ್‌ಗೆ ಹಾಜರಾಗಿದ್ದರು. ಪ್ರಾಧಿಕಾರದ ಸಿಬ್ಬಂದಿ, ದಾಖಲೆಗಳನ್ನು ಪರಿಶೀಲಿಸಿದಾಗ ನಕಲಿ ಎಂಬುದು ಗೊತ್ತಾಗಿತ್ತು, ಆ ಬಗ್ಗೆ ಪ್ರಾಧಿಕಾರದ ಆಡಳಿತಾಧಿಕಾರಿ ಶಿಲ್ಪಾ ಅವರು ಏಪ್ರಿಲ್ 26ರಂದು ದೂರು ನೀಡಿದ್ದರು' ಎಂದು ಮಲ್ಲೇಶ್ವರ ಪೊಲೀಸರು ಹೇಳಿದರು.

'ರಾಜೇಶ್‌ಕುಮಾರ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ. ಅವರು ನಕಲಿ ಅಂಕಪಟ್ಟಿಯನ್ನು ಎಲ್ಲಿಂದ ತಂದಿದ್ದಾರೆ ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ವಿವರಿಸಿದರು.

'ಬಿಹಾರದಲ್ಲಿ ಎಂಬಿಬಿಎಸ್ ಪೂರ್ಣಗೊಳಿಸಿರುವುದಾಗಿ ಹೇಳುತ್ತಿರುವ ಆರೋಪಿ, ರಾಷ್ಟ್ರೀಯ ಅರ್ಹತಾ ಹಾಗೂ ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಉತ್ತಮ ರ್‍ಯಾಂಕ್ ಪಡೆದಿದ್ದಾರೆ' ಎಂದು ಪೊಲೀಸರು ಹೇಳಿದರು.

**ಸುಳಿವು ನೀಡಿದ್ದ ಇ-ಮೇಲ್:** '2019ರ ನೀಟ್ ಪಿ.ಜಿ ಪರೀಕ್ಷೆಯಲ್ಲಿ ಪಡೆದಿದ್ದ ರ್‍ಯಾಂಕ್ ಆಧಾರದಲ್ಲಿ ರಾಜೇಶ್‌ಕುಮಾರ್ ಅವರಿಗೆ ಸಪ್ತಗಿರಿ ವೈದ್ಯಕೀಯ ಕಾಲೇಜಿನಲ್ಲೇ ಸೀಟು ಸಿಕ್ಕಿತ್ತು. ದಾಖಲೆ ಪರಿಶೀಲನೆಗಾಗಿ ಅವರು ಮಾರ್ಚ್ 23ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಎದುರು ಹಾಜರಾಗಿದ್ದರು. ದಾಖಲೆಗಳನ್ನು ಕೊಟ್ಟು ವಾಪಸ್ ಹೋಗಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಕೆಲ ದಿನಗಳ ನಂತರ ಪ್ರಾಧಿಕಾರದ ಅಧಿಕಾರಿಗಳಿಗೆ, ಅಪರಿಚಿತ ವ್ಯಕ್ತಿಯಿಂದ 'ಇ- ಮೇಲ್' ಬಂದಿತ್ತು. 'ಬಿಹಾರದ ರಾಜೇಶ್‌ಕುಮಾರ್ ರಾಯ್, ನಕಲಿ ದಾಖಲೆಗಳನ್ನು ಕೊಟ್ಟು ಸೀಟು ಪಡೆದುಕೊಂಡಿದ್ದಾರೆ. ಅವರ ದಾಖಲೆಗಳನ್ನು ಪರಿಶೀಲನೆ ನಡೆಸಿ. ಅಕ್ರಮ ಹೊರಬರುತ್ತದೆ' ಎಂದು 'ಇ-ಮೇಲ್'ನಲ್ಲಿ ಬರೆಯಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಇ- ಮೇಲ್'ನಲ್ಲಿದ್ದ ಸಂಗತಿಯನ್ನು ಗಂಭೀರವಾಗಿ ಪರಿಗಣಿಸಿದ್ದ ಅಧಿಕಾರಿಗಳು, ದಾಖಲೆಗಳನ್ನು ಮರು ಪರಿಶೀಲನೆ ನಡೆಸಿದ್ದರು. ಅಂಕಪಟ್ಟಿ ಸೇರಿ ಕೆಲ ದಾಖಲೆಗಳು ನಕಲಿ ಎಂಬುದು ಗಮನಕ್ಕೆ ಬಂದಿತ್ತು, ರಾಜೇಶ್‌ಕುಮಾರ್‌ಗೆ ಸಂದೇಶ ಕಳುಹಿಸಿದ್ದ ಅಧಿಕಾರಿಗಳು, ಏಪ್ರಿಲ್ 26ರಂದು ಪುನಃ ದಾಖಲೆಗಳ ಪರಿಶೀಲನೆಗೆ ಬರುವಂತೆ ಹೇಳಿದ್ದರು.'

'ಪರಿಶೀಲನೆಗೆ ಬಂದಿದ್ದ ರಾಜೇಶ್‌ಕುಮಾರ್, ಅಧಿಕಾರಿಗಳ ಎದುರು ತಪ್ಪೊಪ್ಪಿಕೊಂಡಿದ್ದರು. ಅಧಿಕಾರಿಗಳು, ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಪೊಲೀಸರು ವಿವರಿಸಿದರು.

**ವ್ಯವಸ್ಥಿತ ಜಾಲವಿರುವ ಅನುಮಾನ:** 'ಸ್ನಾತಕೋತ್ತರ ಪದವಿ ವ್ಯಾಸಂಗಕ್ಕಾಗಿ ಸೀಟು ಗಿಟ್ಟಿಸಿಕೊಳ್ಳಲು ಕೆಲ ವಿದ್ಯಾರ್ಥಿಗಳು, ನಕಲಿ ಅಂಕಪಟ್ಟಿಗಳನ್ನು ಸೃಷ್ಟಿಸುತ್ತಿದ್ದಾರೆ. ಇದರ ಹಿಂದೆ ವ್ಯವಸ್ಥಿತ ಜಾಲವಿದ್ದು, ಅದನ್ನು ಪತ್ತೆ ಮಾಡಿ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತ ಅಧಿಕಾರಿ ಶಿಲ್ಪಾ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ಶೈಕ್ಷಣಿಕ ಹಾಗೂ ವೈಯಕ್ತಿಕ ಮಾಹಿತಿಯ ದಾಖಲೆಗಳನ್ನು ಸಲ್ಲಿಸಿಯೇ ವಿದ್ಯಾರ್ಥಿಗಳು, ನೀಟ್ ಪರೀಕ್ಷೆ ಬರೆದಿರುತ್ತಾರೆ. ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶಕ್ಕೆ ಅರ್ಹತೆ ಪಡೆದವರ ದಾಖಲೆಗಳನ್ನು ಪ್ರಾಧಿಕಾರವೇ ಪರಿಶೀಲಿಸುತ್ತದೆ. ಇದೇ ಮೊದಲ ಬಾರಿಗೆ ನಕಲಿ ಅಂಕಪಟ್ಟಿ ಕಂಡುಬಂದಿರುವುದಾಗಿ ಅಧಿಕಾರಿಗಳು ಹೇಳುತ್ತಿದ್ದಾರೆ. ಎಲ್ಲ ವಿದ್ಯಾರ್ಥಿಗಳ ದಾಖಲೆಗಳನ್ನು ಮರು ಪರಿಶೀಲಿಸಿ ತಿಳಿಸುವಂತೆ ಕೋರಿದ್ದೇವೆ' ಎಂದು ಪೊಲೀಸರು ವಿವರಿಸಿದರು.

## 'ಮಧ್ಯವರ್ತಿಗಳ ಕೈಚಳಕ'

'ನೀಟ್‌ನಲ್ಲಿ ಉತ್ತಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಬಳಸಿಕೊಂಡು ಮಧ್ಯವರ್ತಿಗಳು ಹಣ ಸಂಪಾದನೆ ಮಾಡುತ್ತಿದ್ದು, ಅವರೇ ಇಂಥ ಅಂಕಪಟ್ಟಿಗಳನ್ನು ಸೃಷ್ಟಿಸುತ್ತಿದ್ದಾರೆ ಎಂಬ ಮಾಹಿತಿ ಇದೆ' ಎಂದು ಪೊಲೀಸರು ಹೇಳಿದರು.

'ಪದವೀಧರ ರಾಜೇಶ್‌ಕುಮಾರ್, ಎಂಬಿಬಿಎಸ್ ಪದವಿಯಲ್ಲೂ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಅಸಲಿ ಅಂಕಪಟ್ಟಿಯನ್ನು ಕೊಟ್ಟು ಬೇರೆ ಕಾಲೇಜಿನಲ್ಲಿ ಈಗಾಗಲೇ ಸೀಟು ಕಾಯ್ದಿರಿಸಿದ್ದಾರೆ. ಸಪ್ತಗಿರಿ ಕಾಲೇಜಿನಲ್ಲೂ ಸೀಟು ಕಾಯ್ದಿರಿಸಲು ಅವರಿಗೆ ಮಧ್ಯವರ್ತಿಯೊಬ್ಬರು ಹೇಳಿದ್ದರು. ಅವರೇ ಅಸಲಿ ಅಂಕಪಟ್ಟಿಯನ್ನು ಹೋಲುವ ನಕಲಿ ಅಂಕಪಟ್ಟಿಯನ್ನು ಕೊಟ್ಟಿರುವ ಸಂಗತಿ ಗೊತ್ತಾಗಿದೆ' ಎಂದರು.

'ಈ ರೀತಿ ಮಾಡುವುದರಿಂದ ವಿದ್ಯಾರ್ಥಿಗೆ ಹಾಗೂ ಮಧ್ಯವರ್ತಿಗೆ ಏನು ಲಾಭ ಎಂಬುದು ಗೊತ್ತಾಗುತ್ತಿಲ್ಲ. ವಿದ್ಯಾರ್ಥಿಯನ್ನು ವಿಚಾರಣೆಗೆ ಒಳಪಡಿಸಿ, ಮಧ್ಯವರ್ತಿಯನ್ನು ಪತ್ತೆ ಮಾಡಿದರೆ ಹೆಚ್ಚಿನ ಮಾಹಿತಿ ಸಿಗಬಹುದು' ಎಂದು ಪೊಲೀಸರು ಹೇಳಿದರು.